

ಅವರ ಆಪ್ತರೂ ಸುಲಭದಲ್ಲಿ ಬಚಾವಾಗಿ ಬಿಡುತ್ತಿದ್ದರು.

ಡಸ್ಟರ್‌ಗಳು ಹಳತಾದಂತೆ ಅವುಗಳ ಮೇಲ್ಮೈ ನವೆದು ಇಂದಿನ ಟೋರ್ನ್ ಜೀನ್ಸ್‌ಗಳಂತೆ ಕಿಂಡಿ ಮೂಡಿಸಿ ಒಳಗಿನ ಮಲ್ಟಿಪಲ್ ಬಣ್ಣದ ಚೆಂದಿಯ ಸ್ಟಫ್ಡ್ ಹೂರಣ ಹೊರಗಿಣುಕುತ್ತಿತ್ತು. ದಿನ ಕಳೆದಂತೆ ಡಸ್ಟರ್‌ಗಳು ಮತ್ತೂ ಶೋಚನೀಯ ಸ್ಥಿತಿ ತಲುಪಿ ಹಿರಣ್ಯಕಶಿಪುವಿನ ಬಗೆದ ಒಡಲಿನಂತಾಗಿ ಒಂದೊಂದೇ ತುಣುಕುಗಳು ಸ್ಟೆಪ್ ಔಟ್ ಆಗುತ್ತಿದ್ದವು. ಮಕ್ಕಳು ಅಂತಹ ಡಸ್ಟರ್‌ಗಳನ್ನು ವಿರಾಮ ಸಮಯದಲ್ಲಿ ಆಡಲು ಬಾಲ್‌ನಂತೆ ಬಳಸಿ ರಾಮ್ ಚೆಂಡ್, ಭೀಮ್ ಚೆಂಡ್ ಎಂದು ಎಸೆದಾಡುತ್ತಾ ಅದಕ್ಕೆ ಮೋಕ್ಷ ಕಾಣಿಸುತ್ತಿದ್ದರು.

ನಾವು ಹೈಸ್ಕೂಲ್ ಕೊನೆಯ ವರ್ಷಕ್ಕೆ ಕಾಲಿರಿಸುವಷ್ಟರಲ್ಲಿ ಬಟ್ಟೆಯ ಡಸ್ಟರ್‌ಗಳ ಯುಗ ಮುಗಿದು ಪಾಲಿಶ್ ಮಾಡಿದ ಪುಟ್ಟ ಮರದ ತುಂಡಿಗೆ ವೆಲ್ವೆಟ್ಟಿನ ಹಸಿರು ಹಾಳೆಯನ್ನು ನೀಟಾಗಿ ಅಂಟಿಸಿದಂತಹ ಡಸ್ಟರ್‌ಗಳು ಬಂದವು. ಈ ಉಡನ್ ಡಸ್ಟರ್‌ಗಳಿಗೆ ಮಿಸೈಲ್‌ಗಳಾಗುವ ಯೋಗವಾಗಲೀ ಸಾಧ್ಯತೆಯಾಗಲೀ ಇರಲಿಲ್ಲ. ನಮಗೆ ಕ್ಲಾಸ್ ತೆಗೆದುಕೊಳ್ಳುತ್ತಿದ್ದ ನಾಜೂಕಿನ ಮೇಡಮ್‌ಗಳಷ್ಟೇ ಅವೂ ಸುಂದರವಾಗಿಯೂ ನಾಜೂಕಾಗಿಯೂ ಇದ್ದವು. ಅವರ ಮೆನಿ ಕ್ಯೂರ್ ಆದ ಕರಗಳ ಹಾಗೂ ನೇಲ್ ಪಾಲಿಶ್ ಬಳಿದ ಸುಂದರ ಬೆರಳುಗಳ ನಡುವೆ ಸಿಲುಕಿದ ಡಸ್ಟರ್‌ಗಳು ನವಿರಾಗಿ ಅಕ್ಷರಗಳನ್ನು ಅಳಿಸುತ್ತಿದ್ದರೆ ನಮಗೆ ಆ ದೃಶ್ಯವನ್ನು ಕಣ್ತುಂಬಿಕೊಳ್ಳುವ ಭಾಗ್ಯ. ಹಾಗಾಗಿ ನಮ್ಮ ತಲೆಯಲ್ಲಿ ಅವರು ಬರೆದ ವಿಷಯ ಮನನವಾಗಿದ್ದಕ್ಕಿಂತ ಆ ಇರೇಸ್ ಪ್ರಕ್ರಿಯೆ ದಾಖಲಾದದ್ದೇ ಹೆಚ್ಚು.

ದಿನಕಳೆದಂತೆ ಬ್ಲ್ಯಾಕ್ ಬೋರ್ಡ್‌ಗಳು ಮೂಲೆಗುಂಪಾಗುತ್ತಾ ವೈಟ್ ಬೋರ್ಡ್, ಗ್ರೀನ್ ಬೋರ್ಡ್‌ಗಳ ಬಳಕೆ ಪ್ರಾರಂಭವಾಯಿತು. ಚಾಕ್ ಪೀಸ್ ಬದಲಿಗೆ ದೂಳು ರಹಿತ ಮಾರ್ಕರ್‌ಗಳು ಬಳಕೆಗೆ ಬಂದವು. ಎಲೆಕ್ಟ್ರೋಸ್ಟ್ಯಾಟಿಕ್ ಫೈಬರ್‌ನಿಂದ ಮಾಡಿದ ಮ್ಯಾಗ್ನೆಟಿಕ್ ಡಸ್ಟರ್‌ಗಳ ಆವಿಷ್ಕಾರವಾಯಿತು. ಡಸ್ಟ್ ಲೆಸ್ ಬರಹಗಳನ್ನು ಅಳಿಸುವ ಡಸ್ಟರ್‌ಗಳು ತಮ್ಮ ಹೆಸರಿನ ಮಹತ್ವ ಕಳೆದುಕೊಂಡು ಕೇವಲ ಇರೇಸರ್‌ಗಳಾಗಿ ಬದಲಾದವು. ಮುಂದಿನ ಪೀಳಿಗೆಯ ಮಕ್ಕಳಿಗೆ ಡಸ್ಟರ್ ಎಂದರೆ ಕೇವಲ ಕಾರಿನ ಚಿತ್ರವಷ್ಟೇ ಮನದಲ್ಲಿ ಮೂಡಬಹುದು. ಚಿಲುಮೆಯಂತೆ ದೂಳಿನ ಮಳೆಗರೆಯುತ್ತಿದ್ದ ಬಟ್ಟೆಯ ಡಸ್ಟರ್‌ಗಳು ಇಂದು ನೆನಪು ಮಾತ್ರ.

ಪ್ರತಿಕ್ರಿಯಿಸಿ: **feedback@sudha.co.in**